# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ. ಎಫ್.ಹೆಚ್.ಜಕ್ಕಪ್ಪನವರ್ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 620(760) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ ಜಿಲ್ಲೆಯ ಡುಮ್ಮವಾಡ ನೀರಸಾಗರ ಕೆರೆಯ ಒಟ್ಟು ವಿಸ್ತೀರ್ಣ ಎಷ್ಟು; | ಧಾರವಾಡ ಜಿಲ್ಲೆಯ ದುಮ್ಮವಾಡ ಕೆರೆಯ ಒಟ್ಟು ವಿಸ್ತೀರ್ಣ =1087 ಎಕರೆ. |
| ಆ) | ಈ ಕೆರೆಯಲ್ಲಾದ ಒತ್ತುವರಿ ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಸದರಿ ಕೆರೆಯ ಸಂರಕ್ಷಣೆಗಾಗಿ DGPS (Differential Global Positioning System) ಸರ್ವೇ ಕಾಮಗಾರಿಯನ್ನು ಕೈಗೊಂಡು ಕೆರೆಯ ಗಡಿಯನ್ನು ಗುರುತಿಸಿ, ತಾತ್ಕಾಲಿಕ ಸರ್ವೇ ಕಲ್ಲುಗಳನ್ನು ಹಾಕಲಾಗಿದೆ. ಜಲಾಶಯದ ನಿರ್ವಹಣೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಮಂಡಳಿಗೆ ನಿರ್ವಹಣಾ ಮೊತ್ತ ಭರಿಸಬೇಕಿದ್ದು, ಸದರಿ ಮೊತ್ತದಲ್ಲಿ ಕೆರೆಯ ಗಡಿಯಲ್ಲಿ ಬೇಲಿ ಹಾಕುವ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| ಇ) | ಈ ಕೆರೆಯ ಸಂರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | DAM SAFETY ACT 2021 ರಲ್ಲಿ ದುಮ್ಮವಾಡ ಕೆರೆಯನ್ನು ಮಧ್ಯಮ ಗಾತ್ರದ ಜಲಾಶಯವೆಂದು ಪರಿಗಣಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 274 ಪಿ.ಆರ್.ಜೆ. 2020, ದಿನಾಂಕ:15.04.2021 ರಂತೆ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಸಂಬಂಧಿಸಿದ ಸಂಪೂರ್ಣ ನೀರು ಸರಬರಾಜು ವ್ಯವಸ್ಥೆಯನ್ನು ಮೇ-2022 ರಲ್ಲಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ ಮತ್ತು ಸದರಿ ಆದೇಶದಲ್ಲಿ ನೀರಸಾಗರ ಜಲಾಶಯದ ದುರಸ್ತಿ ಮತ್ತು ನಿರ್ವಹಣೆಯನ್ನು ಕ.ನ.ನೀ.ಸ ಮತ್ತು ಒ.ಚ ಮಂಡಳಿಯಿಂದ ನಿರ್ವಹಿಸಲು ಸೂಚಿಸಿ, ಸದರಿ ನಿರ್ವಹಣೆಗೆ ತಗಲುವ ವೆಚ್ಚವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಮಂಡಳಿಗೆ ಭರಿಸಲು ಸೂಚಿಸಲಾಗಿದೆ. ಅದರಂತೆ, ಸದರಿ ಜಲಾಶಯದ ದುರಸ್ಥಿ ಮತ್ತು ನಿರ್ವಹಣ ಮಾಡಲು ತಗಲುವ ಅಂದಾಜು ವೆಚ್ಚವನ್ನು ಭರಿಸಲು ಮಹಾನಗರ ಪಾಲಿಕೆಗೆ ತಿಳಿಸಲಾಗಿದೆ. |

| | | |
|---|---|---|
| | | ಪ್ರಸ್ತುತ, ಸರ್ಕಾರದ ಪತ್ರ ಸಂಖ್ಯೆ: ನಅಇ 4 ಯುಡಬ್ಲ್ಯೂಎಸ್ 2026 (ಇ), ದಿನಾಂಕ: 09.07.2026 ರಲ್ಲಿ ಜಲಾಶಯದ ನಿರ್ವಹಣೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಅಗತ್ಯ ಕ್ರಮ ಕೈಗೊಳ್ಳಲು ಮಂಡಳಿಗೆ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ : ನಅಇ 100 ಯುಎಂಎಸ್ 2026

**(ಡಾ.ಯತೀಂದ್ರ ಸಿದ್ದರಾಮಯ್ಯ)**

ನಗರಾಭಿವೃದ್ಧಿ ಸಚಿವರು